# "ಶ್ರೀ ಬ್ರಹ್ಮಣ್ಯತೀರ್ಥರು"





**ಕಂಸಧ್ವಂಸಿಪದಾಂಭೋಜಸಂಸಕ್ತೋ ಹಂಸಪುಂಗವ : ।**
**ಬ್ರಹ್ಮಣ್ಯಗುರುರಾಜಾಖ್ಯೋ ವರ್ತತಾಂ ಮಮ ಮಾನಸೇ ॥**
(ತಾತ್ಪರ್ಯಚಂದ್ರಿಕ)

**ಕಂಸನನ್ನು ಸಂಹರಿಸಿದ ಕೃಷ್ಣನ ಪಾದವೆಂಬ ಕಮಲದಲ್ಲಿ ಆಸಕ್ತರಾದ, ಯತಿಶ್ರೇಷ್ಠರಾದ ಬ್ರಹ್ಮಣ್ಯತೀರ್ಥರು ನನ್ನ ಮನಸ್ಸಿನಲ್ಲಿ ನೆಲಸಲಿ.**

**ಸಮುತ್ಸಾರ್ಯ ತಮ:ಸ್ತೋಮಂ ಸನ್ಮಾರ್ಗ ಸಂಪ್ರಕಾಶ್ಯ ಚ ।**
**ಸದಾ ವಿಷ್ಣುಪದಾಸಕ್ತಂ ಸೇವೇ ಬ್ರಹ್ಮಣ್ಯಭಾಸ್ಕರಮ್ ॥** (ನ್ಯಾಯಾಮೃತ)

**ಜನ್ಮನಾಮ** – ನರಸಿಂಹ

**ತಂದೆ** – ರಾಮಾಚಾರ್ಯರು (ಪೂಗವನ ವಂಶ–ತೋಟಂತಿಲ್ಲಾಯ ವಂಶ)

**ಜನ್ಮಸ್ಥಳ** – ಅಬ್ಬೂರು – ಇದು ಕಣ್ವಮುನಿಗಳ ತಪೋಭೂಮಿ ಕಣ್ವನದಿ ತೀರ

**ಉಪನಯನ** – 8ನೇ ವಯಸ್ಸಿನಲ್ಲಿ

**ವಿದ್ಯಾಭ್ಯಾಸ** – ಶ್ರೀ ಪುರುಷೋತ್ತಮತೀರ್ಥರು


**ಸನ್ಯಾಸ** – ಶ್ರೀ ಪುರುಷೋತ್ತಮತೀರ್ಥರಿಗೆ ಸ್ವಪ್ನ ಸೂಚನೆಯಾದಂತೆ ತಮ್ಮ ಪ್ರಿಯ ಶಿಷ್ಯ ನರಸಿಂಹನಿಗೆ ತಮ್ಮ ಪೀಠದ ಉತ್ತರಾಧಿಕಾರಿಯಾಗಿ ನೇಮಿಸಲು ಸನ್ಯಾಸಾಶ್ರಮ ನೀಡಿದರು.

**ಸನ್ಯಾಸ ನಾಮ** – ಶ್ರೀ ಬ್ರಹ್ಮಣ್ಯತೀರ್ಥರು

**ವೃಂದಾವನ** – ಅಬ್ಬೂರು

**ವೃಂದಾವನ ಪ್ರವೇಶ ದಿನ** – ವೈಶಾಖ ಕೃಷ್ಣ ಏಕಾದಶಿ (1467)

**ಗುಹಾಪ್ರವೇಶ** – ಶ್ರೀಪುರುಷೋತ್ತಮತೀರ್ಥರು ತಮ್ಮ ಇಹಲೋಕದ ಯಾತ್ರೆಯನ್ನು ಮುಗಿಸಲು ನಿಶ್ಚಯಿಸಿ, ಅಬ್ಬೂರು ಸಮೀಪದ ಬೆಟ್ಟದ ಗುಹೆಯೊಂದರಲ್ಲಿ ಪ್ರವೇಶಿಸಿದರು. ಇಂದಿಗೂ ಅದು “ಪುರುಷೋತ್ತಮಗುಹೆ” ಎಂದೇ ಪ್ರಸಿದ್ಧಿ.



**ಮಧುಕರವೃತ್ತಿ** – ಶ್ರೀ ಬ್ರಹ್ಮಣ್ಯತೀರ್ಥರು ಪ್ರತಿದಿನ ಕಣ್ವನದಿಯಲ್ಲಿ ತ್ರಿಕಾಲ ಸ್ನಾನ, ಪ್ರಣವ ಮಂತ್ರ ಜಪ, ಪಾಠ ಪ್ರವಚನ ನಡೆಸುತ್ತಿದ್ದರು. ತಮ್ಮ ಶಿಷ್ಯರು ಮಧುಕರವೃತ್ತಿಯಿಂದ ತರುತ್ತಿದ್ದ ಪಕ್ವಾನ್ನವನ್ನು ಶ್ರೀ ನೃಸಿಂಹದೇವರಿಗೆ ಅರ್ಪಿಸಿ ಶಿಷ್ಯರೊಂದಿಗೆ ಭೋಜನ. ಹೀಗೆ ಅವರ ತಪಸ್ಸು ಅವಿಚ್ಛಿನ್ನವಾಗಿತ್ತು. ಅವರು ಶಿಷ್ಯರು ತಂದ ಭಿಕ್ಷಾನ್ನವನ್ನು ಪ್ರೋಕ್ಷಿಸಿದಾಗ ಅದು ಮತ್ತೆ ಆಗ ತಾನೆ ಪಕ್ವಗೊಂಡ ಅನ್ನದಂತೆ ಬಿಸಿಯಾಗುತ್ತಿದ್ದಿತಂತೆ. ಅವರು ಕಲಶಪೂಜೆ ಮಾಡಿದ ಮೇಲೆ ಅದರಲ್ಲಿ ಉಂಟಾಗುತ್ತಿದ್ದ ದೇವತಾ ಸಾನ್ನಿಧ್ಯದಿಂದಾಗಿ ಅವರ ಶಿಷ್ಯರಿಗೆ ಅದನ್ನು ಎತ್ತಲು ಅಸಾಧ್ಯವಾಗುತ್ತಿದ್ದಿತು ಎಂದು ಪ್ರತೀತಿ.

**ಪವಾಡ – ಶ್ರೀ ವ್ಯಾಸರಾಜರ ಜನ್ಮ** – ಒಮ್ಮೆ ಶ್ರೀ ಬ್ರಹ್ಮಣ್ಯತೀರ್ಥರು ಬನ್ನೂರು ಪ್ರಾಂತ್ಯದಲ್ಲಿ ಸಂಚಾರದಲ್ಲಿದ್ದಾಗ,

ರಾಮಾಚಾರ್ಯನೆಂಬ ವೃದ್ದನು ಸಪತ್ನೀಕನಾಗಿ ಗಂಗಾಸ್ನಾನಕ್ಕೆ ತೆರಳುವಾಗ ಬ್ರಹ್ಮಣ್ಯತೀರ್ಥರು ನೆಲೆಸಿದ್ದ ಸ್ಥಳದ ಬಳಿ ಬರುವ ವೇಳೆಗೆ ವಿಚಿತ್ರ ಜ್ವರವೊಂದರಿಂದ ನಿಧನನಾದನು. ಗಂಡನ ವಿರಹವೇದನೆಯನ್ನು ತಾಳಲಾರದೆ ಅವನ ಪತ್ನಿ, ಪತಿಯೊಂದಿಗೆ ಸಹಗಮನವನ್ನು ಮಾಡಲು ನಿಶ್ಚಯಿಸಿ, ಗುರುಗಳ ಅಪ್ಪಣೆ ಪಡೆಯಲು ಬ್ರಹ್ಮಣ್ಯತೀರ್ಥರಲ್ಲಿಗೆ ಬಂದಳು. ಆದರೆ ಅವಳು ಬಂದು ನಮಸ್ಕರಿಸಿದಾಗ. ತಪೋನಿಧಿಯಾದ ಬ್ರಹ್ಮಣ್ಯತೀರ್ಥರ ಮುಖಾರವಿಂದದಿಂದ ಬಂದ ಅನುಗ್ರಹವೆಂದರೆ "ದೀರ್ಘಸುಮಂಗಲೀಭವ". ಅಲ್ಲಿದ್ದವರಿಗೆಲ್ಲ ಆಶ್ಚರ್ಯ. ಗಂಡ ನಿಧನರಾಗಿರುವಾಗ ಗುರುಗಳು ಹೀಗೇಕೆ ಆಶೀರ್ವದಿಸಿದ್ದಾರೆಂದು. ಆಗ ಗುರುಗಳು "ಇದು ನಮ್ಮ ಮಾತಲ್ಲ, ನಮ್ಮ ಆರಾಧ್ಯಮೂರ್ತಿಯಾದ ಭಗವಂತನ ಅನುಗ್ರಹ. ಅದೆಂದೂ ಸುಳ್ಳಾಗದು. ನಿನ್ನ ಪತಿ ಬದುಕುವನು, ಶತಾಯುಷಿಯಾಗುವನೆಂದರು. ಅವನಿಗೆ ಎರಡು ಮಕ್ಕಳಾಗುವುದೆಂದರು." ಶ್ರೀಗಳು ನೀಡಿದ ಮಂತ್ರೋದಕವನ್ನು ಸ್ವೀಕರಿಸಿ, ಅದನ್ನು ತನ್ನ ಪತಿಯ ಮೃತದೇಹದ ಮೇಲೆ ಪ್ರೋಕ್ಷಿಸಿದಳು. ಆ ಬ್ರಾಹ್ಮಣ ನಿದ್ರೆಯಿಂದೆದ್ದವನಂತೆ ಎದ್ದು ಕುಳಿತ. ಅವನು ಕಾಶೀಯಾತ್ರೆಯನ್ನೂ ಮುಗಿಸಿದ. ಅವನ ಪತ್ನಿ ಗರ್ಭಿಣಿಯಾಗಿ ಸಕಾಲದಲ್ಲಿ ಗಂಡು ಮಗುವನ್ನು ಹಡೆದಳು. ಹೀಗೆ ಜನಿಸಿದ ಮಗುವಿಗೆ ಶ್ರೀಗಳು ಭೂಸ್ಪರ್ಶವಾಗದಂತೆ ಸ್ವರ್ಣಪಾತ್ರೆಯನ್ನೇ ನೀಡಿದರು. ಆ ಮಗುವನ್ನು ತಮ್ಮ ಬಳಿ ತರಿಸಿಕೊಂಡ ಶ್ರೀಗಳು ತಮ್ಮ ಸ್ವಹಸ್ತದಿಂದಲೇ ಕಣ್ವನದಿಯಲ್ಲಿ ತೊಳೆದು, ಭಗವಂತನಿಗೆ ಅಭಿಷೇಕಿಸಿದ ಕ್ಷೀರವನ್ನು ಪಾನ ಮಾಡಿಸುತ್ತ ಪೋಷಿಸಿದರು. ಹಾಗೆ ಆ ಮಗುವನ್ನು ತೊಳೆದ ಸ್ಥಳ "ಶ್ವೇತಶಿಲಾಹ್ರದ" (ಬಿಳಿಕಲ್ಲುಮಡು) ಎಂಬ ಹೆಸರಿನಿಂದ ಇಂದಿಗೂ ಪ್ರಸಿದ್ಧವಾಗಿದೆ. ಆ ಮಗುವೇ ಮಧ್ವಮತವನ್ನು ಉತ್ತುಂಗಕ್ಕೇರಿಸಿದ,

ಸಕಲ ಅನ್ಯಮತಸ್ಥರಿಗೆ ಸಿಂಹಸ್ವಪ್ನರಾದ, ಆನೆಗೊಂದಿ ಕ್ಷೇತ್ರದಲ್ಲಿ ವೃಂದಾವನಸ್ಥರಾದ, ಪ್ರಹ್ಲಾದಾವತಾರರಾದ ಶ್ರೀ ವ್ಯಾಸರಾಜರು.

**ಪವಾಡ – ಮಳೂರು ಕ್ಷೇತ್ರ** – ಒಮ್ಮೆ ಚಿಕ್ಕಗಂಗವಾಡಿ ಅರಸು ಮನೆತನದ ತಿಮ್ಮರಸು ಎಂಬ ರಾಜನಿಗೆ ಸಾರಂಗಧರ ಎಂಬ ಪುತ್ರನಿದ್ದನು. ಅವನ ತಾಯಿ ಅವನ ಬಾಲ್ಯದಲ್ಲೇ ಮೃತಳಾದ್ದರಿಂದ ರಾಜನು (ಮುದುಕನಾಗಿದ್ದರೂ ಕೂಡ) ಮತ್ತೊಬ್ಬ ರಾಜಕುಮಾರಿಯನ್ನು ವಿವಾಹವಾದನು.

ಆದರೆ ಆ ರಾಜಕುಮಾರಿಯಾದರೋ ತನ್ನ ಮಗನಾದ (ಸವತಿಯ ಮಗ), ಸಾರಂಗಧರನನ್ನೇ ಕಾಮಿಸಿದಾಗ, ಆ ರಾಜಕುಮಾರನು ತಿರಸ್ಕರಿಸಲು, ಆ ರಾಜಕುಮಾರಿಯು ಅವನ ಮೇಲಿನ ಸಿಟ್ಟಿನಿಂದ ರಾಜನ ಬಳಿ ಹೋಗಿ ರಾಜಕುಮಾರನು ತನ್ನ ಮಾನಭಂಗಕ್ಕೆ ಪ್ರಯತ್ನಿಸಿದನೆಂದು ಹೇಳಿದಳು. ಆ ರಾಜನಾದರೋ ವಿವೇಕರಹಿತನಾಗಿ ಅವಳ ಮಾತನ್ನು ನಂಬಿ ತನ್ನ ಭಟರಿಗೆ ರಾಜಕುಮಾರನ ಕೈಕಾಲು ಕತ್ತರಿಸಿ, ಕಣ್ವನದಿಯಲ್ಲಿ ಬಿಸಾಡಲು ಆಜ್ಞಾಪಿಸಿದನು. ಅದರಂತೆ ಭಟರು ಮಾಡಿದರು. ಅಲ್ಲಿಯ ನದೀ ತೀರಕ್ಕೆ ಅಂದಿನ ಆಹ್ನೀಕಕ್ಕೆಂದು ತೆರಳಿದ್ದ ಶ್ರೀ ಬ್ರಹ್ಮಣ್ಯತೀರ್ಥರ ದೃಷ್ಟಿ ಅವನ ಮೇಲೆ ಬಿದ್ದಿತು. ಕೂಡಲೇ ಅವರು ನದಿಯ ಮೃತ್ತಿಕೆಯನ್ನು ಅಭಿಮಂತ್ರಿಸಿ, ಅವನ ಮೈಗೆ ಸ್ವತ: ಲೇಪಿಸಿದರು. ಆಗ ಅವನ ಕೈಕಾಲುಗಳು ಮೊಳೆತು ಪುನ: ಮೊದಲಿನಂತಾದನು. ಇದು ನಡೆದದ್ದು ಮಳೂರು ಎಂಬ ಪ್ರಸಿದ್ಧ ಕ್ಷೇತ್ರ ಈ ಕಾರಣದಿಂದಲೇ ಆ ಕ್ಷೇತ್ರಕ್ಕೆ ಮಳೂರು (ಕೈಕಾಲುಗಳು ಮತ್ತೆ ಮೊಳೆತ ಊರು) ಎಂಬ ಹೆಸರಿರುವ ಪ್ರತೀತಿ ಇದೆ. ಇದೇ ಸ್ಥಳದಲ್ಲೇ ಮುಂದೆ ಶ್ರೀ ವ್ಯಾಸರಾಜರು ಅತ್ಯಂತ ಮನೋಹರವಾದ ಅಪ್ರಮೇಯ ಎಂಬ ಹೆಸರಿನ ಬಾಲಕೃಷ್ಣನ

ವಿಗ್ರಹವು ಪ್ರತಿಷ್ಟಿಸಿ, ಪ್ರವಿತ್ರ ಯಾತ್ರಾ ಸ್ಥಳವಾಯಿತು "ಮಳೂರು ಕೃಷ್ಣ"ನೆಂದು.





ಪುರಂದರ ದಾಸರು ತಮ್ಮ "ಜಗದೋದ್ಧಾರನ ಆಡಿಸಿದಳೆಶೋದೆ" ಕೀರ್ತನೆಯನ್ನು ಈ ಮೂರ್ತಿಯನ್ನು ನೋಡೆ ರಚಿಸಿದರೆಂದು ಪ್ರತೀತಿ.
ಅನಂತರ ತನ್ನ ತಪ್ಪಿನ ಅರಿವಾದ, ರಾಜನು ಮರುಗುತ್ತಿರಲು, ಸಾರಂಗಧರನು ಮರಳಿದನು. ಅವನಿಂದ ಶ್ರೀ ಬ್ರಹ್ಮಣ್ಯತೀರ್ಥರ ತಪೋ ಮಹಿಮೆಯನ್ನು ತಿಳಿದು, ಅವರಿಗೆ ತನ್ನ ಸಮಸ್ತ ರಾಜ್ಯವನ್ನು ಸಮರ್ಪಿಸಲು ಮುಂದಾದಾಗೆ, ವಿರಕ್ತ ಶಿರೋಮಣಿಗಳಾದ ಶ್ರೀಬ್ರಹ್ಮಣ್ಯರು ಅದಕ್ಕೆ ಒಪ್ಪದೆ, ತಾವು ವಾಸವಿದ್ದ ಅಬ್ಬೂರು ಗ್ರಾಮವನ್ನು ಮಾತ್ರ ಸ್ವೀಕರಿಸಿದರು.

**ಪವಾಡ – ಬರಪರಿಹಾರ :** ಒಮ್ಮೆ ತಮ್ಮ ಯಾತ್ರೆಯ ವೇಳೆ ಕರ್ನಾಟಕದ ರಾಜಧಾನಿಯಾದ ವಿಜಯನಗರವನ್ನು ತಲುಪಿದಾಗ, ಅಲ್ಲಿನ ದೇವಾಲಯದಲ್ಲಿ ಸ್ವರ್ಣಪೀಠದಲ್ಲಿ ಪೂಜೆಯನ್ನು ನೆರವೇರಿಸಿದರು. ಆ ವೇಳೆಗೆ ಅಲ್ಲಿನ ಜನರೆಲ್ಲ ಬಂದು ಈ ಸ್ಥಳದಲ್ಲಿ ಹಲವಾರು ವರುಷಗಳಿಂದ ಅನಾವೃಷ್ಠಿಯಾಗಿದೆ. ನಾವು ಮಾಡಿದ ಜಪಹೋಮಾದಿಗಳೆಲ್ಲ ವ್ಯರ್ಥವಾಗಿದೆ. ಅದರ ಪರಿಹಾರಕ್ಕೋಸ್ಕರ ತಮ್ಮ ಕೃಪಾದೃಷ್ಟಿಯನ್ನು ಬೀರಬೇಕೆಂದು ಕೋರಿದಾಗ, ಶ್ರೀಗಳು ತಮ್ಮ ಶಿಷ್ಯರಿಗೆ ಆದೇಶಿಸಿ, ಪರ್ಜನ್ಯಜಪವನ್ನು ಮಾಡಿಸಿದರು. ಜನಗಳಿಗೆ ಅಚ್ಚರಿಯೋ ಅಚ್ಚರಿ. ಹನಿನೀರೂ ಇಲ್ಲವಾಗಿದ್ದ ಆ

ಸ್ಥಳದಲ್ಲಿ ಜಲಧಾರೆ ಸುರಿಯತೊಡಗಿತು. ಬರಪ್ರದೇಶ ಸುಭಿಕ್ಷಪ್ರದೇಶವಾಗಿತ್ತು.

**ಬ್ರಹ್ಮಣ್ಯಪುರ** – ತನ್ನ ರಾಜ್ಯಕ್ಕೆ ಶ್ರೀ ಬ್ರಹ್ಮಣ್ಯತೀರ್ಥರಿಂದ ಆದ ಅನುಗ್ರಹದಿಂದ ರೋಮಾಂಚನಗೊಂಡ ಶ್ರೀಕೃಷ್ಣದೇವರಾಯನು, ಚನ್ನಪಟ್ಟಣದ ಬಳಿ ಇರುವ ಫಲಭರಿತವಾದ ಅನೇಕ ಗ್ರಾಮಗಳನ್ನು ಸಮರ್ಪಿಸಿದನು. ಶ್ರೀವ್ಯಾಸರಾಜರಾದರೋ ಆ ಗ್ರಾಮಗಳನ್ನೆಲ್ಲ ತಮ್ಮ ಶಿಷ್ಯವರ್ಗಕ್ಕೆ ಸೇರಿದ 32 ಜನ ಬ್ರಾಹ್ಮಣರಿಗೆ ದಾನವಾಗಿತ್ತು, ಆ ಸ್ಥಳವೇ “ಬ್ರಹ್ಮಣ್ಯಪುರ”. ಈಗ ಆ ಜಾಗವನ್ನು “ಬ್ರಹ್ಮಣಿಪುರ” ಎಂದು ಕರೆಯಲ್ಪಡುತ್ತಿದ್ದು, ಚನ್ನಪಟ್ಟಣದಿಂದ ಬೆಂಗಳೂರಿಗೆ ಬರುವ ಮಾರ್ಗದಲ್ಲಿ ಚನ್ನಪಟ್ಟಣ ಬಸ್ ನಿಲ್ದಾಣದಿಂದ ೨ ಕಿ.ಮೀ. ದೂರದ ಮುಖ್ಯ ರಸ್ತೆಯಿಂದ ಬಲಭಾಗದಲ್ಲಿದೆ.

**ವಿಟ್ಠಲ ಬೆಟ್ಟ** – ಒಮ್ಮೆ ಭಗವಂತನು ಶ್ರೀಗಳಿಗೆ ಸ್ವಪ್ನದಲ್ಲಿ ಬಂದು ಅಬ್ಬೂರಿನ ಬಳಿಯಿರುವ ಬೆಟ್ಟವೊಂದರಲ್ಲಿ ಭೂಮಿಯೊಳಗೆ ಅಡಗಿರುವ ಮೂರ್ತಿಯನ್ನು ತೆಗೆದು ಪೂಜಿಸಬೇಕೆಂದು ಆಜ್ಞಾಪಿಸಿದನು. ಅದರಂತೆ ಹುಡುಕಿದ ಅವರಿಗೆ ಸುಂದರ ವಿಠಲಪ್ರತಿಮೆಯೂ ಲಭಿಸಿತು. ಅಂದಿನಿಂದ ಆ ಬೆಟ್ಟಕ್ಕೆ **“ವಿಟ್ಟಲಬೆಟ್ಟ”** ಎಂಬ ಹೆಸರಾಯಿತು.

**ಬ್ರಹ್ಮಣ್ಯಪುರದಲ್ಲಿ ಶ್ರೀನೃಸಿಂಹ ಧ್ವಜಸ್ತಂಭದ ಸ್ಥಾಪನೆ** – ಒಮ್ಮೆ ಶ್ರೀ ಬ್ರಹ್ಮಣ್ಯತೀರ್ಥರು ಉತ್ತರಕರ್ನಾಟಕದ ಶಿರಸಿಯ ಬಳಿಯ ಬನವಾಸಿ ಎಂಬ ಗ್ರಾಮವನ್ನು ಸಂದರ್ಶಿಸಿದ್ದರು. ಅಲ್ಲಿ ನರಸಿಂಹಾಚಾರ್ಯ ಮತ್ತು ಕೃಷ್ಣಾಚಾರ್ಯ ಎಂಬ ಬ್ರಾಹ್ಮಣರ ಮನೆಯಲ್ಲಿ ಭಿಕ್ಷೆಯನ್ನು ಸ್ವೀಕರಿಸಿದ್ದರು. ಆಗ ತಮ್ಮೊಂದಿಗೆ ಬರಲು

ಇಚ್ಛೆಸಿದ, ಖಾದ್ರಿ ನರಸಿಂಹನ ಆರಾಧಕರಾದ ಶ್ರೀಕೃಷ್ಣಾಚಾರ್ಯರನ್ನು ತಮ್ಮೊಂದಿಗೆ ಕರೆತಂದರು. ಒಮ್ಮೆ ಕೃಷ್ಣಾಚಾರ್ಯರು ಖಾದ್ರಿಯ ನರಸಿಂಹಸ್ವಾಮಿಯನ್ನು ಸಂದರ್ಶಿಸಲು ಅಪೇಕ್ಷಿಸಿದರು. ಆದರೆ ವೃದ್ಧಾಪ್ಯದಿಂದ ಚಿಂತಿತರಾದರು. ಅವರ ಭಕ್ತಿಗೆ ಮೆಚ್ಚಿದ ಸ್ವಾಮಿ ನರಸಿಂಹನು ಅವರಿಗೆ ಸ್ವಪ್ನದಲ್ಲಿ ದರ್ಶನವಿತ್ತು, ತಿರುವೇಂಗಳನಾಥಬೆಟ್ಟದ ಸ್ಥಳವೊಂದರಲ್ಲಿ ಸನ್ನಿಹಿತನಾಗಿರುವುದನ್ನು ಸೂಚಿಸಿದನಂತೆ. ಕೃಷ್ಣಾಚಾರ್ಯರು ಈ ವಿಷಯವನ್ನು ಶ್ರೀಗಳಿಗೆ ತಿಳಿಸಿದರು. ಆಗ ಶ್ರೀಗಳು ಆ ಸ್ವಪ್ನ ನಿರ್ದಿಷ್ಟಿತ ಸ್ಥಳಕ್ಕೆ ಧಾವಿಸಿದಾಗ, ಧ್ವಜಸ್ಥಂಭದ ಮೇಲ್ಭಾಗದ ಚೌಕಾಕಾರದ ಕಲ್ಲೊಂದು ಕಾಣಿಸಿತು. ಶ್ರೀಗಳು ಕಂಬವೊಂದನ್ನು ನಿರ್ಮಿಸಿ ಅದರ ಪೂರ್ವಭಾಗದಲ್ಲಿ ಶಂಖಚಕ್ರಗಳನ್ನು, ದಕ್ಷಿಣದಲ್ಲಿ ಆಂಜನೇಯನನ್ನೂ, ಉತ್ತರದಲ್ಲಿ ಗರುಡನನ್ನೂ ಕೆತ್ತಿಸಿ, ಅದರ ಮೇಲೆ ಸ್ವಪ್ನಸೂಚಿತವಾಗಿದ್ದ ಸ್ಥಳದಲ್ಲಿ ದೊರೆತ ಧ್ವಜಸ್ಥಂಭವನ್ನು ಕೂರಿಸಿ, ಆ ಬೆಟ್ಟದೆ ಮೇಲೆಯೇ ಸ್ಥಾಪಿಸಿ, ಪೂಜಾವ್ಯವಸ್ಥೆಯನ್ನು ಏರ್ಪಡಿಸಿದರು. ಅದರ ನಿತ್ಯಪೂಜೆಯನ್ನು ಶ್ರೀಕೃಷ್ಣಾಚಾರ್ಯರಿಗೇ ನೀಡಿದರು.

## ಬ್ರಹ್ಮಣ್ಯಪುರದಲ್ಲಿ ಪ್ರಾಣವಿಗ್ರಹ ಪ್ರತಿಷ್ಠಾಪನೆ



ಒಮ್ಮೆ ಅವರಿಗೆ ಸ್ವಪ್ನ ಸೂಚನೆಯಂತೆ ಅಲ್ಲಿ ಸೀತಾಲಕ್ಷ್ಮಣ ಸಮೇತ ಶ್ರೀರಾಮಚಂದ್ರನನ್ನು, ಶಂಖಚಕ್ರ ಧಾರಿಯಾಗಿದ್ದ ಆಂಜನೇಯನ ವಿಗ್ರಹವೊಂದು ಲಭಿಸಿತು. ಯತಿತ್ರಯರಾದ ಶ್ರೀಬ್ರಹ್ಮಣ್ಯತೀರ್ಥರು, ಶ್ರೀ ಶ್ರೀಪಾದರಾಜರೂ ಮತ್ತು ಶ್ರೀ ವ್ಯಾಸರಾಜರೂ ಮೂವರೂ ಸೇರಿ ಅಲ್ಲಿ ಪ್ರಾಣವಿಗ್ರಹ ಪ್ರತಿಷ್ಠಾಪನೆ ಮಾಡಿ, ಆ ವಿಗ್ರಹದ ಮೇಲೆ ಶ್ರೀ ಬ್ರಹ್ಮಣ್ಯತೀರ್ಥ ಕರಾರ್ಚಿತ ಶ್ರೀ ನರಸಿಂಹ ಸಾಲಿಗ್ರಾಮವೊಂದು ಸ್ಥಾಪಿಸಲ್ಪಟ್ಟಿದ್ದು, ಅದನ್ನೂ ಸಹ ಅಲ್ಲಿ ಕಾಣಬಹುದು.

**ಶ್ರೀರಾಜೇಂದ್ರ ಪೂರ್ವಾದಿಮಠ** – ಶ್ರೀಬ್ರಹ್ಮಣ್ಯತೀರ್ಥರು ವ್ಯಾಸರಾಜರಿಗೆ ಆಶ್ರಮ ನೀಡಿ ಅವರನ್ನು ಶ್ರೀಪಾದರಾಜರಲ್ಲಿಗೆ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಕಳುಹಿಸಿದರು. ಶ್ರೀವ್ಯಾಸರಾಜರು ಶ್ರೀ ಶ್ರೀನಿವಾಸತೀರ್ಥರಿಗೆ ಆಶ್ರಮ ನೀಡಿದರು. ಶ್ರೀನಿವಾಸತೀರ್ಥರು ಶ್ರೀ ಲಕ್ಷ್ಮೀಕಾಂತತೀರ್ಥರಿಗೆ ಮತ್ತು ಶ್ರೀಲಕ್ಷ್ಮೀಧರತೀರ್ಥರಿಗೆ ಆಶ್ರಮ ನೀಡಿದರು. ಆಗಿನ ಕಾಲದಲ್ಲೇ ವ್ಯಾಸರಾಜಮಠ ಸೋಸಲೆ ವ್ಯಾಸರಾಜಮಠ ಮತ್ತು ಕುಂದಾಪುರ ವ್ಯಾಸರಾಜಮಠವೆಂದು ಎರಡು ಭಾಗವಾಯಿತು.

**ಬ್ರಹ್ಮಣ್ಯತೀರ್ಥರ ಬಗ್ಗೆ ರಚನೆಗಳು** –

**೧. ವ್ಯಾಸರಾಜರು ತಮ್ಮ ನ್ಯಾಯಾಮೃತ ಮತ್ತು ತಾತ್ಪರ್ಯಚಂದ್ರಿಕಾ ಕೃತಿಗಳಲ್ಲಿ ಸ್ತುತಿಸಿದ್ದಾರೆ.**

**೨. "ವ್ಯಾಸರಾಜರು ಶ್ರೀಬ್ರಹ್ಮಣ್ಯತೀರ್ಥ ಪಂಚರತ್ನಮಾಲಿಕಾಸ್ತೋತ್ರ" ಎಂಬ ಪ್ರತ್ಯೇಕ ಕೃತಿಯನ್ನು ರಚಿಸಿರುವರು.**

**೩. ಅವರ ಶಿಷ್ಯರಾದ ಶ್ರೀ ಶ್ರೀನಿವಾಸತೀರ್ಥರು "ಶ್ರೀ ಬ್ರಹ್ಮಣ್ಯತೀರ್ಥ ಮಂಗಲಾಷ್ಟಕ" ಹಾಗೂ "ಶ್ರೀ ಬ್ರಹ್ಮಣ್ಯತೀರ್ಥ ವಿಜಯ" ಎಂಬ ಸಂಸ್ಕೃತ ಕೃತಿಗಳನ್ನು ರಚಿಸಿರುವರು.**

**೪. ಶ್ರೀ ಆರ್.ಎಸ್. ಶೇಷಗಿರಿರಾಯರ "ಶ್ರೀ ಬ್ರಹ್ಮಣ್ಯತೀರ್ಥ ಗುರುರಾಜರ ಮಹಿಮೆ"**

**೫. ಶ್ರೀ ಹರಿದಾಸರತ್ನಂ ಗೋಪಾಲದಾಸರು ಪ್ರಕಟಿಸಿರುವ "ಬ್ರಹ್ಮಣ್ಯಪುರ" ಮತ್ತು "ಶ್ರೀ ಬ್ರಹ್ಮಣ್ಯತೀರ್ಥ ಕೃತಿಮಂಜರಿ"**

**೬.ಶ್ರೀ ನವರತ್ನ ನಾರಾಯಣ ಮೂರ್ತಿಯವರ "ಶ್ರೀ ಬ್ರಹ್ಮಣ್ಯತೀರ್ಥರು"**

**೭. ಶ್ರಿ ವ್ಯಾಸನಕೆರೆ ಪ್ರಭಂಜನಾಚಾರ್ಯರ "ಶ್ರೀ ಬ್ರಹ್ಮಣ್ಯತೀರ್ಥರು"**

ರಾ ಗ – ಕ ಲ್ಯಾ ಣಿ : ತಾ ಳ – ಛಾ ಪು ತಾ ಳ

ವೃಂದಾವನ ನೋಡಿರೊ ನೀವೆಲ್ಲಾ
ನಂದವನ್ನೆ ಪೊಂದಿರೊ । ಪ ।

ರಾಮಾಚಾರ್ಯರ ಪುತ್ರರೊ ಅವರು ಮಾಮನೋಹರ ನೃಹರಿದೂತರೊ
ಜನ್ಮಅಷ್ಟಕೆ ಬ್ರಹ್ಮಚರ್ಯ ಪೊಂದಿ ಬ್ರಹ್ಮವಿದ್ಯೆಯ ಪಡೆದರೊ
ಪ್ರೇಮದಿಂದಲಿ ಬಂದು ತಾವ್ ಪುರುಷೋತ್ತಮತೀರ್ಥರ ಸಾರ್ದರೊ। ೧ ।

ಕಾಯಜಪಿತನ ತಾನ್ವಲಿಸೀ ದೇಶಂಗಳ ಪ್ರೀಯದಿಂದಲಿ ಸಂಚರಿಸೀ
ಮಾಯಾರಮಣನು ಜೀವನೂ ಒಂದೆಂಬ ಮಾಯಾವಾದಿಗಳ ತರಿದೂ
ವಾಯುಮತಪ್ರೀತಿಯಲಿ ಅರುಹುತ ಪ್ರೀಯ ಅಬ್ಬೂರಲ್ಲಿ ನೆಲಸಿದ । ೨ ।

ವಿಟ್ಠಲನೃಹರಿ ಪೂಜೆಗೆ ನೇಮಿಸಿ ತಮ್ಮ ಪಟ್ಟಶಿಷ್ಯರು ವ್ಯಾಸತೀರ್ಥರ
ಅಟ್ಟಹಾಸದಿ ಸರ್ವಜಿತೂ ಸಂವತ್ಸರ ಕೃಷ್ಣೈಕಾದಶೀ ವೈಶಾಖ
ದಿಟ್ಟ ಗುರುಗೋವಿಂದವಿಟ್ಠಲನ ದೃಷ್ಟಿಸೀ ತನು ಬಿಟ್ಟು ಪೊರಟನ । ೩ ।

**ಸಂಗ್ರಹ ಲೇಖನ – ನರಹರಿಸುಮಧ್ವ (99916904341)**

**www.sumadhwaseva.com**
**Email ID naraharisumadhwa@yahoo.in**